## ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.

ಸಿ. ಸಿ. ನಂ. 68/2017

ಸಿಡಬ್ಲೂ-8 ಪಿಡಬ್ಲೂ-5

| | | |
|---|---|---|
| ಹೆಸರು | : | ಶ್ರೀ ಆಸೀಪ್ |
| ತಂದೆಯ ಹೆಸರು | | ಶೇಖ ಮಹೆಮೂದ್ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ಮುಖ್ಯ ಪೇದೆ |
| ವಾಸ ಸ್ಥಳ | : | ಚಿತ್ತಾಪುರ |

---

ದಿನಾಂಕ 19-09-2023

ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ**

ನಾನು 2015 ರಿಂದ 2020 ರವರೆಗೆ ಸೇಡಂ ಪೋಲಿಸ ಠಾಣೆಯಲ್ಲಿ ಆರಕ್ಷಕನಾಗಿ ಸೇವೆ ಸಲ್ಲಿಸಿರುತ್ತೇನೆ.

ದಿನಾಂಕಃ 20.07.2016 ರಂದು ಠಾಣಾ ಕರ್ತವ್ಯದಲ್ಲಿದ್ದಾಗ ಮದ್ಯಾನ 12.30 ಗಂಟೆಗೆ ಸುಮಾರಿಗೆ ಸೇಡಂ ಪಟ್ಟಣದ ಭೋಟಿ ಗಿರಣಿ ಕ್ರಾಸ ಹತ್ತಿರ ಅಕ್ರಮವಾಗಿ ಕಲಬೆರಕೆ ಸೇಂದಿ ಮಾರಾಟ ಮಾಡುತ್ತಿದ್ದ ಬಗ್ಗೆ ಬಾತ್ಮಿ ಬಂದ ವಿಷಯವನ್ನು ಚಾಸಾ-1 ರವರು ನನಗೆ, ಚಾಸಾ-4 ರಿಂದ 7 ರವರಿಗೆ ತಿಳಿಸಿ, ಇಬ್ಬರು ಪಂಚರನ್ನು ಬರಮಾಡಿಕೊಂಡು ದಾಳಿಗೆ ಹೋಗುವ ವಿಷಯವನ್ನು ಪಂಚರಾದ ಚಾಸಾ-2 ಮತ್ತು 3 ರವರಿಗೆ ತಿಳಿಸಿ, ಎಲ್ಲರೂ ಸೇರಿಕೊಂಡು ಒಂದು ಖಾಸಗಿ ವಾಹನದಲ್ಲಿ ಕುಳಿತುಕೊಂಡು ಮದ್ಯಾನ 12.40 ಗಂಟೆ ಠಾಣೆಯನ್ನು ಬಿಟ್ಟು ಬಾತ್ಮಿ ಬಂದ ಸ್ಥಳಕ್ಕೆ ಮದ್ಯಾನ 01.00 ಕ್ಕೆ ತಲುಪಿದ್ದು, ಜೀಪನ್ನು ಅಲ್ಲಿಯೇ ಸ್ವಲ್ಪ ದೂರದಲ್ಲಿ ನಿಲ್ಲಿಸಿ ಮರೆಯಲ್ಲಿ ನಿಂತುಕೊಂಡು ವಾಚ್ ಮಾಡಲಾಗಿ ಮೂರು ಜನರು ಸಾರ್ವಜನಿಕರಿಗೆ ಸೇಂದಿ ಮಾರಾಟ ಮಾಡುತ್ತಿದ್ದ ಬಗ್ಗೆ ಖಚಿತಪಡಿಸಿಕೊಂಡು ಅವರ ಮೇಲೆ ದಾಳಿ ಮಾಡಿ ಹಿಡಿದು ವಿಚಾರಿಸಲಾಗಿ ತಮ್ಮ ಹೆಸರು 1. ಶಂಕರ ತಂದೆ ಶರಣಪ್ಪ ಬೈರಾಮಡಗಿ, 2. ಕಾಂತಮ್ಮ ಗಂಡ ಶಂಕರ ರಾಠೋಡ, 3. ಶಾರದಾಬಾಯಿ ಗಂಡ ಸುರೇಶ ಜಾದವ ಅಂತಾ ತಿಳಿಸಿದ್ದು ಅವರ ಹತ್ತಿರವಿದ್ದ ಒಂದು ಲೀ. ಅಳತೆಯ ಸುಮಾರು 43 ಸೇಂದಿ ಪ್ಯಾಕೇಟಗಳು ಹಾಗೂ ರೂ.870/- ಇದ್ದವು. ಸದರಿ ಸೇಂದಿ ಪ್ಯಾಕೇಟಗಳ ಪೈಕಿ ಒಂದು ಬಾಟಲನಲ್ಲಿ ಶಾಂಪಲಗಾಗಿ ತೆಗೆದುಕೊಂಡು, ಉಳಿದ ಮಾಲುಗಳನ್ನು ಪಂಚರ ಸಮಕ್ಷಮ ಚಾಸಾ-1 ರವರು ಮದ್ಯಾನ 01.00 ರಿಂದ 02.00 ಗಂಟೆ ವರೆಗೆ ಜಪ್ತಿಪಡಿಸಿಕೊಂಡು ಸ್ಥಳದಲ್ಲಿ ವಿವರವಾದ ಪಂಚನಾಮೆ ಬರೆದು, ಪಂಚರಿಗೆ ಓದಿ ಹೇಳಿ ಸಹಿ ಪಡೆದುಕೊಂಡಿರುತ್ತಾರೆ. ನಂತರ ಮು.ಮಾ. ಹಾಗೂ ಆರೋಪಿಯೊಂದಿಗೆ ಠಾಣೆಗೆ ಬಂದಿದ್ದು ಚಾಸಾ-1 ರವರು ಆರೋಪಿತರ ವಿರುದ್ಧ ಕ್ರಮ ಕೈಗೊಳ್ಳಲು ಠಾಣಾಧಿಕಾರಿಗಳಿಗೆ ವರದಿ ಮಾಡಿಕೊಂಡಿರುತ್ತಾರೆ . ಸದರಿ ದಿನ ದಾಳಿ ಮಾಡಿ ಬಂದಿಸಿದ ವ್ಯಕ್ತಿಗಳನ್ನು

ನೋಡಿದರೆ ಗುರುತಿಸುತ್ತೇನೆ. *(ಆರೋಪಿತರು ಈ ದಿವಸ ನ್ಯಾಯಾಲಯದ ಮುಂದೆ ಗೈರು ಇದ್ದು ಆರೋಪಿ ಪರ ವಕೀಲರು ಹಾಜರಾತಿ ವಿನಾಯತಿ ಕೋರಿ ಅರ್ಜಿ ಸಲ್ಲಿಸಿರುತ್ತಾರೆ ಮತ್ತು ಆರೋಪಿತರ ಗುರುತು ಪರಿಚಯದ ಕುರಿತು ಯಾವುದೇ ಆಕ್ಷೇಪಣೆ ಇರುವುದಿಲ್ಲ ಎಂದು ವಾದ ಮಂಡಿಸಿರುತ್ತಾರೆ.)* ಶಾಂಪಲಗಾಗಿ ಜಪ್ತಿಪಡಿಸಿಕೊಂಡ ಸೇಂದಿ ಬಾಟಲನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿರುತ್ತದೆ.

**<u>ಪಾಟೀ ಸವಾಲುಃ ಶ್ರೀ ಎ. ಎಮ್. ಆರೋಪಿ ಪರ ವಕೀಲರಿಂದ</u>**

ಭೋಟಿ ಗಿರಣಿಗೆ ಹೋಗಬೇಕಾದ್ದಲ್ಲಿ ರಸ್ತೆಯ ಎಡಬದಿಗೆ ಸೇವಾಲಾಲ ಮಂದಿರ ಇರುತ್ತದೆ ಎಂದರೆ ಸರಿ. ಭೋಟಿ ಗಿರಣಿ ಏರಿಯಾದಲ್ಲಿ 600 ರಿಂದ 700 ಜನರು ವಾಸಮಾಡುತ್ತಾರೆ ಎಂದರೆ ಸರಿ. 1 ನೇ ಆರೋಪಿ ಬಸವನಗರದ ನಿವಾಸಿ ಎಂದರೆ ಸರಿ. ಘಟನಾ ಸ್ಥಳದ ಅಕ್ಕ-ಪಕ್ಕದಲ್ಲಿ ಯಾರ ಮನೆಗಳು ಇರುತ್ತವೆ ಎಂದು ನಾನು ವಿಚಾರಣೆ ಮಾಡಿಲ್ಲ. ಘಟನಾ ಸ್ಥಳ ಯಾರ ಮಾಲಿಕತ್ವದ ಮನೆ ಎಂದು ಹೇಳಲು ಬರುವುದಿಲ್ಲ. ಯಾವ ಆರೋಪಿತರಿಂದ ಎಷ್ಟು ಸೇಂದಿ ಪಾಕೇಟುಗಳನ್ನು ಜಪ್ತಿಪಡಿಸಿಕೊಂಡಿರುತ್ತಿರಿ ಎಂದರೆ ಸಾಕ್ಷಿ ಮೂವರು ಒಟ್ಟಾಗಿ ಮಾರಾಟ ಮಾಡುತ್ತಿದ್ದು ಅವರಿಂದ 47 ಸೇಂದಿ ಪಾಕೇಟುಗಳನ್ನು ಜಪ್ತುಪಡಿಸಿಕೊಂಡಿರುವುದಾಗಿ ನುಡಿಯುತ್ತಾರೆ. ಯಾವ ಆರೋಪಿಯಿಂದ ನಗದು ಹಣವನ್ನು ಜಪ್ತಿಪಡಿಸಿಕೊಂಡಿರುತ್ತೇವೆ ಎಂದು ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ಅದೇ ರೀತಿ ಹಾಗೇ ನಗದು ಹಣ ಯಾವ ಮುಖ ಬೆಲೆಯ ನೋಟುಗಳನ್ನು ಹೊಂದಿದ್ದವು ಎಂದು ಹೇಳಲು ಬರುವುದಿಲ್ಲ. ಆ ದಿವಸ ನಮ್ಮ ಸಾಹೇಬರೊಂದಿಗೆ ರೇಡಗೆಂದು ಹೋಗಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿವಸ ಆರೋಪಿತರಿಂದ 40 ಲೀ. ಸೇಂದಿ ಮತ್ತು ರೂ.870/- ಹಣವನ್ನು ಜಪ್ತಿಪಡಿಸಿಕೊಂಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿವಸ ಪಂಚನಾಮೆಯ ಕಾಲಕ್ಕೆ ಜಪ್ತಿಪಡಿಸಿಕೊಂಡ ಉಳಿದ ಮು.ಮಾಲನ್ನು ನಾಶಪಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಯಾವುದೇ ರೇಡನ್ನು ಮಾಡದೇ ಇದ್ದರೂ ಸಹ ಆರೋಪಿತರ ವಿರುದ್ಧ ಸುಳ್ಳು ಪ್ರಕರಣ ದಾಖಲಿಸಿ ನಮ್ಮ ಸಾಹೇಬರ ಹೇಳಿಕೆ ಮೇರೆಗೆ ನಾನು ಈಗ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದ ಮುಂದಿರುವ ಮು.ಮಾಲಿಗೂ ಆರೋಪಿತರಿಗೂ ಏನು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮೇಲಾಧಿಕಾರಿಯವರ ಮಾತುಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಬರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರ. ದ. ನ್ಯಾ. ದಂ. ಸೇಡಂ.

*SYH